ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ - 27.09.2024

ಸಾಕ್ಷಿದಾರರ ಹೆಸರು	–	ಪಾಂಡುರಂಗ ಎಸ್.	ಪ್ರಾ.ಸಾ.	–	20
ತಂದೆಯ ಹೆಸರು	–	ಲೇಟ್ ರಾಮಾಂಜಿನಪ್ಪ	ಚಾ.ಸಾ.	–	26
ವಯಸ್ಸು	–	56 ವರ್ಷ			
ಉದ್ಯೋಗ	–	ಡಿ.ವೈ.ಎಸ್.ಪಿ., ಕೆ ಜಿ ಎಪ್ ಉಪ ವಿಭಾಗ			
ವಾಸ ಸ್ಥಳ	–	ಕೆ ಜಿ ಎಪ್			

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –

ನಾನು ದಿನಾಂಕ 26.10.2019 ರಿಂದ 01.07.2023 ರವರೆಗೆ ಚಿತ್ರದುರ್ಗ ಡಿವೈ.ಎಸ್.ಪಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 01.08.2020 ರಂದು ಮಾನ್ಯ ಎಸ್ ಪಿ ರವರಿಂದ ಈ ಪ್ರಕರಣದ ತನಿಖೆಯನ್ನು ಮಾಡುವಂತೆ ಆದೇಶದ ಪ್ರತಿಯನ್ನು ಪಡೆದಿರುತ್ತೇನೆ . ಸಾಕ್ಷಿ ಎಸ್.ಪಿ ಸದರಿ ಆದೇಶದ ಪ್ರತಿ ನೋಡಿ ಗುರುತಿಸಿದ್ದು ಅದನ್ನು ನಿಪಿ-35 ಎಂದು ಗುರುತಿಸಲಾಯಿತು . ನಂತರ ಚಿತ್ರಹಳ್ಳಿ ಗೇಟ್ ಪೋಲೀಸ್ ಠಾಣೆಗೆ ಹೋಗಿ ಚಾಸಾ -25 ರವರಿಂದ ಕಡತವನ್ನು ಪಡೆದಿರುತ್ತೇನೆ . ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ -1 ತೋರಿಸಿದಂತೆ ಚಾಸಾ -2, 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ . ಕಚ್ಚಾನಕಾಶೆ ತೆಗೆಯಿಸಿರುತ್ತೇನೆ . ಸಾಕ್ಷಿ ನಿಪಿ - 1 ನ್ನು ನೋಡಿ ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 (ಡಿ) ಎಂದು ಗುರುತಿಸಲಾಯಿತು. ಫೋಟೋ ತೆಗೆಯಿಸಿರುತ್ತೇನೆ . ಸಾಕ್ಷಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ -2 ರಿಂದ 7 ಎಂದು ಗುರುತಿಸಲಾಗಿದೆ . ಸ್ಥಳ

ದಿಂದ ಅರೆ ಬರೆ ಸುಟ್ಟಿರುವ ಕೇಬಲ್ ವೈರ್ , ಒಂದು ಅರ್ಧ ಸುಟ್ಟಿರುವ ಅಲ್ಯೂಮಿನಿಯಂ ಚಿಕ್ಕ ಪಾತ್ರೆ , 3 ಅಡಿ ಉದ್ದದ ಒಂದು ಪೋಲ್ಸ್ ,ಒಂದು ಕಬ್ಬಿಣದ ಮಚ್ಚು ,ಒಂದು 3 ¾ ಅಡಿ ಉದ್ದ ¾ ಇಂಚು ದಪ್ಪದ ಕಬ್ಬಿಣದ ಸ್ಪಿಂಕ್ಲರ್ , ಒಂದು ಕುಡಿಗೋಲು , ಸುಟ್ಟು ಹೋಗಿರುವ ಗುಡಿಸಲಿನ ಗಳಗಳು , ಒಂದು ಕಬ್ಬಿಣದ ಕೊಡಲಿ , 2 ಅಡಿ ಉದ್ದದ ಅಡಿಕೆ ದೆಬ್ಬೆ , ಟೇಬರ್ ಪ್ಯಾನ್ ನ ಕಬ್ಬಿಣ ತಂತಿಯ ಕವರ್ , ಅರೆ ಬರೆ ಸುಟ್ಟಿರುವ 2 ಅಡಿಕೆ ಸಸಿಗಳು , ಅರೆ ಬರೆ ಸುಟ್ಟಿರುವ 3 ಸ್ಟೀಲ್ ತಟ್ಟೆ , ಮೂರು ಲೋಟ , 1 ಕೈ ಚಮಚ ಇವುಗಳನ್ನು ವಶಪಡಿಸಿಕೊಂಡಿರುತ್ತೇನೆ . ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.- 1 ರಿಂದ 12 ಎಂದು ಗುರುತಿಸಲಾಗಿದೆ . ಸ್ಥಳದಲ್ಲಿ ಅಡಿಕೆ ಸಸಿಗಳನ್ನು ಕಿತ್ತು ಹಾಕಿದ್ದ ಗುಂಡಿಗಳು ಇದ್ದವು . ಮೆಕ್ಕೆ ಜೋಳದ ಪಸಲನ್ನು ಪ್ರಾಣಿಗಳನ್ನು ಬಿಟ್ಟು ಮೇಯಿಸಿದ್ದು ಕಂಡು ಬರುತ್ತದೆ . ಒಂದು ಶೆಡ್ ಸಂಪೂರ್ಣ ಸುಟ್ಟು ಹೋಗಿದ್ದು ಗೃಹೋಪಯೋಗಿ ವಸ್ತುಗಳು ಸುಟ್ಟು ಹೋಗಿರುತ್ತವೆ . ಸದರಿ ಬೋರ್ ವೆಲ್ ನ್ನು ಕಲ್ಲಿನಿಂದ ಜಜ್ಜಿ ಜಖಂಗೊಂಡಿಸಿದ್ದು ಕಂಡುಬಂದಿರುತ್ತದೆ . ಬೋರ್ ವೆಲ್ ಗೆ ಅಳವಡಿಸಿದ ಕಬ್ಬಿಣದ ಪೈಪ್ ಮತ್ತು ಕೇಬಲ್ ಸುಟ್ಟಿದ್ದು ಕಂಡುಬಂದಿರುತ್ತದೆ . ಅದೇದಿನ ಚಾಸಾ -1 ರವರ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ . ಆರೋಪಿತರನ್ನು ಪತ್ತೆ ಮಾಡಿಕೊಂಡು ಬರುವಂತೆ ಚಾಸಾ -25 ರವರಿಗೆ ನಿರ್ದೇಶನ ನೀಡಿರುತ್ತೇನೆ .ಪ್ರ ವ ವರದಿ ನ್ಯಾಯಾಲಯಕ್ಕೆ ನೀಡಿದ ಬಗ್ಗೆ ಚಾಸಾ -22 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ -23 ಇವರಿಂದ ಭಾರತಿಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿ ಪ್ರಮಾಣ ಪತ್ರ ಪಡೆದಿರುತ್ತೇನೆ . ಸಾಕ್ಷಿಯು ಸದರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಸದರಿ ದಾಖಲೆ ನಿಪಿ -36 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -36(ಎ) ಎಂದು ಗುರುತಿಸಲಾಯಿತು .

ದಿಃ 02.08.2020 ರಂದು 1 ಮತ್ತು 3 ನೇ ಆರೋಪಿಗಳನ್ನು ಚಾಸಾ- 21 ಹಾಜರುಪಡಿಸಿದ್ದು ಅವರನ್ನು ವಿಚಾರಣೆ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ .

ದಿಃ 04.08.2020 ರಂದು ಚಾಸಾ -1 , 10 , 11, 12 , 13 ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ ಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 07.08.2020 ರಂದು ವಾಸು ಇವರ ಮೊಬೈಲ್ ನ್ನು ಕಾಲ್ ಡಿಟೇಲ್ಸ್ ನ್ನು ನೀಡುವಂತೆ ಎಸ್ ಪಿ ರವರಿಗೆ ಮನವಿ ಮಾಡಿದ್ದು 08.08.2020 ರಂದು ಸದರಿ ಡಿಟೇಲ್ಸ್ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 11.08.2020 ರಂದು ಚಾಸಾ-1, 10 ರಿಂದ 13 , 7, 14, 15, ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 18.08.2020 ರಂದು ಕೃತ್ಯ ನಡೆದ ಸ್ಥಳವನ್ನು ಚಾಸಾ -7 ತೋರಿಸಿದ ಸ್ಥಳದಲ್ಲಿ ಚಾಸಾ -8 , 9 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ , ಕಚ್ಚಾನಕಾಶೆ ಫೋಟೋ ತೆಗೆಯಿಸಿರುತ್ತೇನೆ . ಸಾಕ್ಷಿ ನಿಪಿ -12 ನ್ನು ನೋಡಿ ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ - 12 (ಡಿ) ಎಂದು ಗುರುತಿಸಿಲಾಯಿತು . ಸಾಕ್ಷಿ ನಿಪಿ -13 , 14 ಫೋಟೋ ನೋಡಿ ಗುರುತಿಸಿರುತ್ತಾರೆ . ಅದೇ ದಿನ ಚಾಸಾ-8,9 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ -24 ರವರಿಂದ ಭಾರತಿಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿ ಪ್ರಮಾಣ ಪತ್ರ ಪಡೆದಿರುತ್ತೇನೆ . ಸಾಕ್ಷಿಯು ನಿಪಿ -34 ನೋಡಿ ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -34(ಬಿ) ಎಂದು ಗುರುತಿಸಲಾಯಿತು .

ದಿಃ 25.08.2020 ರಂದು ಚಾಸಾ-17 ರವರಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ 29 ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು .

ದಿಃ13.08.2020 ರಂದು ಚಾಸಾ -1 , 10 ರಿಂದ 13 ಇವರ ಮೇಲೆ ಆದ ಗಲಾಟೆ ಬಗ್ಗೆ ಚಾಸಾ -4 ಇವರು ಮೊಬೈಲ್ ನಲ್ಲಿ ಸಂಗ್ರಹಿಸಿದ್ದು ಅದನ್ನು ಪನ್ ಡ್ರೈವ್ ಮುಖಾಂತರ ಹಾಜರುಪಡಿಸಿದ್ದು ಅದನ್ನು ಚಾಸಾ -5 , 6 ಇವರ ಸಮಕ್ಷಮ ಮಹಜರ್ ಮಾಡಿ ಜಪ್ತು ಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 38/20 ರಲ್ಲಿ ಅಳವಡಿಸಿಕೊಂಡಿರುತ್ತೇನೆ . ಸಾಕ್ಷಿ ನಿಪಿ-9 ನ್ನು ನೋಡಿ ತನ್ನ ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು . ಸಾಕ್ಷಿ 2 ಫೋಟೋ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -11,12 ಎಂದು ಗುರುತಿಸಲಾಗಿದೆ . ಸಾಕ್ಷಿ ಪೆನ್ ಡ್ರೈವ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.- 13 ಎಂದು ಗುರುತಿಸಲಾಗಿದೆ . ಜಪ್ತು ಪಂಚನಾಮೆ ಸ್ಥಳದ ಫೋಟೋವನ್ನು ಚಾಸಾ -24 ತೆಗೆದಿದ್ದು ಅವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿ ಪ್ರಮಾಣ ಪತ್ರ ಪಡೆದಿರುತ್ತೇನೆ . ಸಾಕ್ಷಿಯು ಸದರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -33(ಬಿ) ಎಂದು ಗುರುತಿಸಲಾಯಿತು .

ದಿಃ 08.09.2020 ರಂದು ಜಿಲ್ಲಾ ಆಸ್ಪತ್ರೆ , ಚಿತ್ರದುರ್ಗದಿಂದ ಚಾಸಾ-10 ರಿಂದ 13 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ -18 ರವರಿಂದ ಪಡೆದಿರುತ್ತೇನೆ . ನಿಪಿ -16 ರಿಂದ 19 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ .

ದಿಃ 18.09.2020 ರಂದು ಚಾಸಾ –1 ಇವರ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ . ಸಾಕ್ಷಿಯು ನಿಪಿ–15 ನ್ನು ನೋಡಿ ಸಹಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ – 15(ಬಿ) ಎಂದು ಗುರುತಿಸಲಾಗಿದೆ .

ದಿಃ 07.10.2020 ರಂದು ಚಾಸಾ–16 ರವರಿಂದ ಚಾಸಾ –1 ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ಪಡೆದಿರುತ್ತೇನೆ . ಸಾಕ್ಷಿಯು ನಿಪಿ–20 ರಿಂದ 22 ನ್ನು ನೋಡಿ ಗುರುತಿಸಿರುತ್ತಾರೆ .

ದಿಃ 17.10.2020 ರಂದು ಚಾಸಾ –20 ಇವರು ಬೆಳೆ ಹಾನಿ ಬಗ್ಗೆ ವರದಿ ನೀಡಲು ಆಗುವುದಿಲ್ಲ ಎಂದು ವರದಿ ನೀಡಿರುತ್ತಾರೆ . ಸಾಕ್ಷಿಯು ನಿಪಿ–28 ನ್ನು ನೋಡಿ ಗುರುತಿಸಿರುತ್ತಾರೆ .

ದಿಃ 20.10.2020 ರಂದು ಚಾಸಾ–16 ಇವರು ಗುಡಿಸಲು ನಾಶವಾದ ಬಗ್ಗೆ 8 ಸಾವಿರ ನಷ್ಟವಾಗಿದೆ ಎಂದು ವರದಿ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿ–23 ನ್ನು ನೋಡಿ ಗುರುತಿಸಿರುತ್ತಾರೆ .

ದಿಃ 06.11.2020 ರಂದು ಚಾಸಾ –16 ಇವರು ಜಮೀನಿನ ಪಹಣಿ ಮತ್ತು ಮ್ಯೂಟೇಷನ್ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ–26 , 27 ನ್ನು ನೋಡಿ ಗುರುತಿಸಿರುತ್ತಾರೆ .

ತನಿಖೆ ಮುಕ್ತಾಯವಾದ್ದರಿಂದ 11 ಜನರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ .

(ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಚಿತ್ರದುರ್ಗ.

ದಿಃ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –

ನಾನು ತಾಂತ್ರಿಕ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ . ನಮ್ಮ ಇಲಾಖೆಯ ಕ್ಯಾಮಾರಾ ಸೋನಿ ಡಿಜಿಟಲ್ ಇರುತ್ತದೆ . ಸದರಿ ಕ್ಯಾಮಾರಾದಲ್ಲಿ ಸೆಟಿಂಗ್ಸ್ ಇರುತ್ತದೆ ಎಂದರೆ ಸರಿ . ಸದರಿ ಕ್ಯಾಮಾರಾ ದಲ್ಲಿ ಫೋಟೋ ತೆಗೆದರೆ ಫೋಟೋದಲ್ಲಿ ದಿನಾಂಕ ಮತ್ತು ಸಮಯ ಬರುತ್ತದೆ ಎಂದರೆ ಸರಿಯಲ್ಲ. ಖಾಸಗಿ ಲ್ಯಾಬ್ ದಲ್ಲಿ ಪ್ರಿಂಟ್ ಮಾಡಿಸಿದ್ದು ಬಿಲ್ ನ್ನು ತನಿಖಾಧಿಕಾರಿಯವರಿಗೆ ನೀಡಿಲ್ಲ . ಕೃತ್ಯ ನಡೆದ ಸ್ಥಳದಲ್ಲಿ ತನಿಖಾಧಿಕಾರಿ ಮಹಜರ್ ಮಾಡಿದ್ದು ಸದರಿ ಮಹಜರ್ ಗೆ ನನ್ನ ಸಹಿ ಪಡೆದಿಲ್ಲ . ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ ಮತ್ತು ನಾನು ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ–34 ರಲ್ಲಿ ಯಾವ ಕ್ಯಾಮಾರದಿಂದ ಫೋಟೋ ತೆಗೆದಿದ್ದೇನೆ ಎಂದು ಬರೆದಿಲ್ಲ ಎಂದರೆ ಸರಿ . ನಾನು ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.